**ದಿನಾಂಕ:20-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲು: 1 ನೇ ಎದುರುದಾರರ ಪರ: ಎಂವೈಎಸ್. ವಕೀಲರಿಂದ:**

ನಾನು ಯಾವ ವರ್ಷದಲ್ಲಿ ಹುಟ್ಟಿದ್ದೇನೆ ಎಂದು ನೆನಪಿಲ್ಲ. ನನಗೆ ಈಗ 75 ವರ್ಷ ವಯಸ್ಸಾಗಿದೆ ಎಂದರೆ, ಸಾಕ್ಷಿ ಯಾವುದೇ ಉತ್ತರವನ್ನು ನೀಡುವುದಿಲ್ಲ. ನಾನು ಆ ದಿನ ಜೀಪಿನಲ್ಲಿ ಹೋಗಬೇಕಾದರೆ ನನ್ನ ಜೊತೆ ಶೇಖರ, ರಂಜಿತಾ, ಈರಮ್ಮ, ಸೋಮಶೇಖರ ಮತ್ತು ಆಕಾಶ್ ಎನ್ನುವವರು ಇದ್ದರು ಎಂದರೆ ಸರಿ. ವಾಹನವನ್ನು ಶೇಖರ್ ಎನ್ನುವವರು ಚಲಾಯಿಸುತ್ತಿದ್ದರು. ಶೇಖರ್ ರವರಿಗೆ ವಾಹನ ಚಲಾಯಿಸಲು ಚಾಲನಾ ಪರವಾನಗಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಇದೆ, ಅದನ್ನು ಹಾಜರುಪಡಿಸಬಹುದು. ನನಗೆ ಸಣ್ಣಪುಟ್ಟ ಗಾಯಗಳಾಗಿದ್ದ ಕಾರಣ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಕಾರಣದಿಂದ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ತೀವ್ರತರವಾದ ಪೆಟ್ಟಾಗಿದ್ದು ಚಿಕಿತ್ಸೆಗಾಗಿ ರೂ.50,000/- ಖರ್ಚು ಮಾಡಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಇಬ್ಬರು ಮಕ್ಕಳು ಇರುತ್ತಾರೆ, ಅವನ ಹೆಸರು ಕಲ್ಲೇಶ, ನಾನು ನನ್ನ ಮಗನ ಜೊತೆಯಲ್ಲಿ ವಾಸ ಮಾಡುತ್ತೇನೆ. ನನ್ನ ಮಗ ಟಿಂಬರ್ ಕೆಲಸ ಮಾಡುತ್ತಾನೆ. ನನ್ನ ಮಗ ನನ್ನನ್ನು ಸಾಕುತ್ತಿದ್ದಾನೆ, ನಾನು ಯಾವುದೇ ಕೆಲಸಕ್ಕೆ ಹೋಗುವುದಿಲ್ಲ ಮತ್ತು ನನಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ಸರ್ಕಾರ ನನಗೆ ಬಿ ಪಿಎಲ್ ಕಾರ್ಡ್ ಕೊಟ್ಟಿದೆ ಎಂದರೆ ಸರಿ. ನಾನು ಕೂಲಿ ಕೆಲಸ ಮಾಡುತಿದ್ದು ತಿಂಗಳಿಗೆ ರೂ.20,000/- ದುಡಿಯುತ್ತಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪ್ರಯಾಣ ಮಾಡುತ್ತಿದ್ದ ವಾಹನಕ್ಕೆ ವಿಮಾ ಪಾಲಿಸಿ ಇಲ್ಲದ ಕಾರಣ 1 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ವಾಹನ ಚಾಲಕನಿಗೆ ಡಿಎಲ್ ಇಲ್ಲದ ಕಾರಣ, ನಾನು ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ವಿಮಾ ಪಾಲಿಸಿ ಹೊಂದಿರುವವರನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ,

ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಪ್ರಮಾಣಪತ್ರದಲ್ಲಿ ಹೇಳಿರುವ ವಿಷಯಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.